ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ ದಿನಾಂಕ : DATE : 09/07/2019

# ದಂತವೈದ್ಯರ ನೋಂದಣಿ ತಿದ್ದುಪಡಿಗೆ ಅಸ್ತು

**ನವದೆಹಲಿ:** ಲೋಕಸಭೆ ಕಳೆದ ವಾರ ಅಂಗೀಕರಿಸಿದ್ದ ದಂತ ವೈದ್ಯರ ನೋಂದಣಿ (ತಿದ್ದುಪಡಿ) ಮಸೂದೆಗೆ ರಾಜ್ಯಸಭೆ ಸೋಮವಾರ ಒಪ್ಪಿಗೆ ನೀಡಿದೆ. 1948ರ ದಂತ ವೈದ್ಯರ ಕಾಯ್ದೆಗೆ ಕೆಲವು ತಿದ್ದುಪಡಿಯನ್ನು ಸೂಚಿಸಿದ್ದ ಈ ಮಸೂದೆಯನ್ನು ಆರೋಗ್ಯ ಸಚಿವ ಹರ್ಷವರ್ಧನ್ ಮಂಡಿಸಿದ್ದರು. ಭಾರತೀಯ ದಂತವೈದ್ಯ ಮಂಡಳಿ, ರಾಜ್ಯಗಳ ದಂತವೈದ್ಯ ಮಂಡಳಿಗಳು ಮತ್ತು ರಾಜ್ಯಗಳು ಜಂಟಿಯಾಗಿ ರಚಿಸಿಕೊಂಡ ದಂತವೈದ್ಯ ಮಂಡಳಿಗಳನ್ನು ಸಮನ್ವಯಗೊಳಿಸುವ ಮಸೂದೆ ಇದಾಗಿದೆ. ಈ ಮಂಡಳಿಗಳಲ್ಲಿ ನೋಂದಣಿಯಾದ ದಂತವೈದ್ಯರನ್ನು ಎ ಮತ್ತು ಬಿ ವಿಭಾಗದಲ್ಲಿ ವರ್ಗೀಕರಿಸಲಾಗಿದ್ದು, ಮಾನ್ಯತೆ ಪಡೆದ ದಂತವೈದ್ಯ ಶಿಕ್ಷಣ ಪೂರೈಸಿದವರನ್ನು ಎ ವಿಭಾಗದಲ್ಲೂ, ಇಂಥ ವಿದ್ಯಾರ್ಹತೆ ಪಡೆಯದವರನ್ನು ಬಿ ವಿಭಾಗದಲ್ಲೂ ಗುರುತಿಸಲಾಗಿದೆ.



**ಪಾಕ್ ಸರಕಿನ ಮೇಲೆ ಶೇ. 200 ತೆರಿಗೆ:** ಪಾಕಿಸ್ತಾನದಿಂದ ಆಮದಾಗುವ ಸರಕುಗಳ ಮೇಲೆ ಶೇ. 200 ತೆರಿಗೆ ವಿಧಿಸುವ ಗೊತ್ತುವಳಿಗೆ ರಾಜ್ಯಸಭೆ ಅನುಮೋದನೆ ನೀಡಿದೆ. ಮಸೂರ, ಬೋರಿಕ್ ಆ್ಯಸಿಡ್, ಡಯಾಗ್ನಸ್ಟಿಕ್ ಮತ್ತು ಪ್ರಯೋಗಾಲಯಗಳಲ್ಲಿ ಬಳಸುವ ರಾಸಾಯನಿಕಗಳ ಮೇಲೆ ಮೂಲ ಸೀಮಾಸುಂಕ (ಬಿಸಿಡಿ) ಹೆಚ್ಚಿಸುವ ಗೊತ್ತುವಳಿ ಇದಾಗಿದೆ.